ಶ್ರೀ ಎಸ್. ಗೋಪಾಲಗೌಡ.—ಈ ಜೆನೆರಿಸಿ ಕಾನೂನನ್ನು ಬೊಂಬಾಯಿ ಜೆನೆರಿಸಿ ಆಕ್ಟ್ ಪ್ರಕಾರ ತಿದ್ದುಪಡಿ ಮಾಡಲು ತಕ್ಕ ಕಾರ್ಯಕ್ರಮಗಳನ್ನು ಬೇಗ ಈ ಸರ್ಕಾರ ಕೈಕೊಳ್ಳುತ್ತದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಕಾನೂನು ಮಾಡತಕ್ಕ ವಿಚಾರ ಲೆಜಿಸ್ಲೇಷನ್ ಡಿಪಾರ್ಟ್‌ಮೆಂಟಿಗೆ ಸೇರತಕ್ಕ ಕೆಲಸ.

ಶ್ರೀ ಎಸ್. ಗೋಪಾಲಗೌಡ.—ಈಗ ಬೊಂಬಾಯಿಯಲ್ಲಿ 1/6 ಭಾಗ ಅಥವಾ 10 ವರ್ಷ ಎಂದು ಮಾಡಿರತಕ್ಕದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—1/6 ಭಾಗ ಎಂಬುದು ನನಗೆ ತಿಳಿಯದು. 10 ವರ್ಷ ಎಂದು ಹೇಳಿರತಕ್ಕದ್ದು ನನಗೆ ಗೊತ್ತಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಆಕ್ಟಿನ 8ನೆಯ ಸೆಕ್ಷನ್ (ಆರ್ಟಿಕಲ್)ನಲ್ಲಿ ತಿಳಿಸಿರುವ ಗೇಣೀದಾರಿಯನ್ನು ಯಾವ ಆಧಾರದ ಮೇಲೆ ಗೊತ್ತುಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವನ್ನೆಲ್ಲಾ ಆ ಆಕ್ಟಿನಲ್ಲೇ ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ವಾಯಿದೆ ಗೊತ್ತುಮಾಡಿರುವುದರಿಂದ ಗೇಣೀದಾರರಿಗೆ ತೊಂದರೆ ಆಗುತ್ತದೆಂಬುದು ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ —ನೋಡಬೇಕು, ಈಗ ಅದನ್ನೆಲ್ಲಾ ನೋಡುವುದಕ್ಕಾಗಿಯೇ ಜಾರಿಗೆ ಕೆಲವು ಕಡೆ ತಂದಿದೆ.

ಶ್ರೀ ಎಸ್. ಗೋಪಾಲಗೌಡ.—ಗೇಣೀದಾರರು ರಶೀದಿ ಬರೆದುಕೊಡಬೇಕೇ ?

Sri KADIDAL MANJAPPA.—Those are allm atters contained in the Act.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನನ್ನು ಸಂಸ್ಥಾನಾದ್ಯಂತವೂ ಬೇಗ ಜಾರಿಗೆ ತರುತ್ತೀರಾ ?

Sri KADIDAL MANJAPPA.—I have already stated on the floor of the House on a previous occasion that Government have no objection to apply this Act throughout the State.

ಶ್ರೀ ಎಸ್. ಗೋಪಾಲಗೌಡ.—ಈಗ ಈ ಗೇಣೀದಾರರು ಮಾಡುತ್ತಿರುವ ಬಿಟ್ಟಿ-ಬೇಗಾರಿ ಇನ್ನೂ ನಿಂತಿಲ್ಲವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಮಾಡತಕ್ಕ ಬಿಟ್ಟಿ ಕೆಲಸವನ್ನು ಈಗ ನಿಲ್ಲಿಸಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ತಾವು ಹೇಳಿರತಕ್ಕದ್ದೆಲ್ಲಾ ಕೇವಲ ಕಾನೂನಿನಲ್ಲಿ ಹೇಳಿರತಕ್ಕದ್ದೇ ಶಿವಾಯ ಆಚರಣೆಯಲ್ಲಿ ಮಾತ್ರ ಬಂದಿಲ್ಲವೆಂದು ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನಿನಲ್ಲಿ ಸೂಚಿಸಿರತಕ್ಕ ಎಲ್ಲ ಅಂಶಗಳನ್ನೂ ಕರಾರುವಾಕ್ಕಾಗಿ ಜಾರಿಗೆ ತಂದು, ಅದರಂತೆ ನಡೆಸುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾಗಿಯೇ ಜಾರಿಗೆ ತೆಗೆದುಕೊಂಡು ಬಂದಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ತೀರ್ಥಹಳ್ಳಿ-ಹೊಸನಗರ ತಾಲ್ಲೂಕುಗಳಲ್ಲಿ ಆ ರೀತಿ ಜಾರಿಗೆ ತಂದಿಲ್ಲವೆಂದು ತೋರಿಸಿದರೆ ಏನು ಕ್ರಮಕೈಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಊಹಾ ಪ್ರಶ್ನೆ ಆಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀರಂಗಪಟ್ಟಣವಲ್ಲಿ ಈಗಾಗಲೇ ಈ ಕೇಸುಗಳು ದಾಖಲಾಗಿರತಕ್ಕ ಸಂಖ್ಯೆ 150ಕ್ಕೆ ಏರಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲೇ ತಿಳಿಸಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಉತ್ತರದಲ್ಲಿ 18 ಮಾತ್ರ ತಿಳಿಸಲಾಗಿದೆ. ನಾನು ಹೇಳುತ್ತಿರುವ 150 ಕೇಸುಗಳು ದಾಖಲಾಗಿ, ನೂರಾರು ಕೇಸುಗಳು ದಾಖಲಾಗದೆ ಇನ್ನೂ ಉಳಿದಿರುತ್ತವೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀರಂಗಪಟ್ಟಣ ತಾಲ್ಲೂಕಿಗೆ, ಈ ಕೇಸುಗಳು ಜಾಸ್ತಿಯಾಗಿರುವುದರಿಂದ ಒಬ್ಬ ಸ್ಪೆಷಲ್ ಅಮಲ್ದಾರರನ್ನು, ಇಲ್ಲಿಗೆ ಹಾಕಿಕೊಡಬೇಕೆಂದು ಜನರಿಂದ ಅಹವಾಲುಗಳು ಬಂದಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟೊಂದು ಕೇಸುಗಳು ಜಾಸ್ತಿಯಾಗಿ, ಕೆಲಸ ಜಾಸ್ತಿಯಿದ್ದರೆ ಅಂಥಕಡೆಗೆ ಒಬ್ಬ ಪ್ರತ್ಯೇಕ ಅಮಲ್ದಾರರನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಗುತ್ತಿಗೆಯ ವಾಯಿದೆಯನ್ನು 5 ವರ್ಷಗಳಿಗೊಂದಾವರ್ತಿ ಬದಲಾಯಿಸಲು ತಿಳಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರಗಳನ್ನೆಲ್ಲಾ ಆಕ್ಟಿನಲ್ಲೇ ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ 5 ವರ್ಷ ವಾಯಿದೆಯಿದ್ದರೂ, ಇನ್ನೂ ಮುಂಚಿತವಾಗಿಯೇ ಬಲವಂತ ಮಾಡಿ ಬಿಡಿಸಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥದೇನಾದರೂ ಇದ್ದರೆ, ಅವನ್ನೆಲ್ಲಾ ಅಮಲ್ದಾರರ ಗಮನಕ್ಕೆ ತರಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ತಂದಿದ್ದರೂ, ಅವರಿಗೆ ಯಾವ ಪರಿಹಾರವೂ ದೊರೆತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದು ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. ಅಂಥ ನಂದರ್ಭಗಳಿದ್ದರೆ, ಜಿಲ್ಲಾಧಿಕಾರಿಗಳಿಗೂ ಮತ್ತು ಸರ್ಕಾರಕ್ಕೂ ಅಪೀಲ್ ಮಾಡಿಕೊಳ್ಳಲು ಅವರಿಗೆ ಅವಕಾಶ ನೀಡಲಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಅವರು ಅಮಲ್ದಾರರ ತೀರ್ಮಾನಕ್ಕೆ ಕಾದು, ತದನಂತರ ಜಿಲ್ಲಾಧಿಕಾರಿಗಳಿಗೆ ಅಪೀಲ್ ಮಾಡಿಕೊಂಡು, ಅಷ್ಟಿರಿಗೆ ಸರ್ಕಾರಕ್ಕೆ ಅಪೀಲ್ ತರಲು 2-3 ವರ್ಷಗಳು ಕಳೆದುಹೋಗಿ ಅವರ ಜೀವನೋಪಾಯವೆಲ್ಲಾ ಹಾಳಾಗಿ ಅವರು ದರಿದ್ರರಾಗುತ್ತಾರೆಂಬುದು ತಮಗೆ ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ನೇರವಾಗಿ ಸರ್ಕಾರಕ್ಕೆ ಅಪೀಲ್ ಮಾಡಿಕೊಳ್ಳುವುದಕ್ಕೂ ಅವಕಾಶ ವಿದೆ.

Applications for sinking bore-wells pending with the Sanitary Engineer.

Q.—299. Sri L. SIDDAPPA (Channagiri).—

Will the Government be pleased to state :—

(*a*) whether there are a number of applications from private persons

pending before the Sanitary Engineer for sinking new bore-wells both for agricultural and for domestic purposes;

(*b*) whether it is a fact that the department have only one boring machine, and on that account, applications made with the necessary deposits have been pending for years together without work being executed;

(*c*) whether it has come to the notice of Government that persons intending to have bore-wells for agricultural and domestic purposes are hesitating to apply, seeing that there is no prospect of the works being executed early;

(*d*) whether it is a fact that the Committee appointed by the Government of India with Sir S. V. Ramamurthy as Chairman, to study the area affected by the drought conditions in the State and to suggest and recommend measures, have recommended the sinking of bore-wells for irrigation purposes in the area;

(*e*) whether the Government has made any arrangements or proposed to make, to have adequate number of boring machines to comply with the requests of the rural population in the State?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) There are 12 bore-well machines. Works are taken up in the order of priority.

(*c*) Not aware.

(*d*) Yes.

(*e*) Six new sets are under purchase.

ಶ್ರೀ ಎಲ್. ಸಿದ್ದಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ "ಇವೆ" ಎಂದು ತಿಳಿಸಿದ್ದೀರಿ. ಹಾಗೆ ಇತ್ಯರ್ಥವಾಗದೆ ಎಷ್ಟು ಅರ್ಜಿಗಳು ಉಳಿದಿವೆ?

Sri KADIDAL MANJAPPA.—I am not able to give you the exact number of petitions.

ಶ್ರೀ ಎಲ್. ಸಿದ್ದಪ್ಪ.—12 ಯಂತ್ರಗಳಿವೆಯೆಂದು ತಿಳಿಸಿದ್ದೀರಿ. ಇವೇನು working order ನಲ್ಲಿ ಇರತಕ್ಕವುಗಳೋ ಅಥವಾ stock register ನಲ್ಲಿ ಇರತಕ್ಕವುಗಳೋ?

Sri KADIDAL MANJAPPA.—Most of them are in working order. But they are very old.

ಶ್ರೀ ಎಲ್. ಸಿದ್ದಪ್ಪ.—ಒಂದು ವರ್ಷದಲ್ಲಿ ಎಷ್ಟು ಬಾವಿಗಳನ್ನು ಬೋರ್ ಮಾಡುವುದಕ್ಕಾಗುತ್ತದೆಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

Sri KADIDAL MANJAPPA.—It depends upon the availability of funds.

ಶ್ರೀ ಎಲ್. ಸಿದ್ದಪ್ಪ.—(ಇ) ಪ್ರಶ್ನೆಗೆ ಉತ್ತರವಾಗಿ 6 ಸೆಟ್ಟುಗಳನ್ನು ಹೊಸದಾಗಿ ಕೊಂಡುಕೊಳ್ಳಲಾಗುತ್ತದೆಂದು ತಿಳಿಸಿದ್ದೀರಿ. ಅಷ್ಟೇ ಸಾಕೋ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾಗುವುದಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಈಗ ತಾವು ರಿಜಿಸ್ಟರ್ ಮಾಡಿಕೊಂಡಿರತಕ್ಕ ಅಪ್ಲಿಕೇಷನ್‌ಗಳ ಬಗ್ಗೆ ಆ ಬಾವಿಗಳನ್ನು ಪೂರೈಸಬೇಕಾಗಿದ್ದರೆ ಇನ್ನೂ 3-4 ವರ್ಷಗಳು ಕೆಲಸ ಮಾಡಬೇಕಾಗಿರುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೊಸದಾಗಿ ಆರು ಸೆಟ್ಟು ಯಂತ್ರಗಳನ್ನು ಕೊಂಡುಕೊಳ್ಳುವುದರ ಜೊತೆಗೆ ಕೇಂದ್ರದವರ ಸಹಾಯವನ್ನು ಕೋರಿದ್ದೇವೆ. ಅವರೂ ಕೂಡ ಸಹಾಯ ನೀಡಬಹುದು.

ಶ್ರೀ ಪಿ. ಆರ್. ರಾಮಯ್ಯ.—ಈಗ ಈ ಕೆಲಸಕ್ಕಾಗಿ ಒಬ್ಬರೇ ಒಬ್ಬರು ಬೋರಿಂಗ್ ಇಂಜನಿಯರಿರುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಷ್ಟು ಸಿಬ್ಬಂದಿಯಿದೆ.

ಶ್ರೀ ಪಿ. ಆರ್. ರಾಮಯ್ಯ.—ಕೇವಲ 12 ಮಂದಿ ಆಪರೇಟರುಗಳು ಮಾತ್ರ ಇದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—12 ಮಂದಿ ಮೆಕ್ಯಾನಿಕ್‌ಗಳೂ, ಆಪರೇಟರುಗಳೂ ಮತ್ತು ಆ ಕೆಲಸಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಸಿಬ್ಬಂದಿ ಎಲ್ಲಾ ಇರುತ್ತಾರೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿ.—ಚಿತ್ರದುರ್ಗ ತಾಲ್ಲೂಕು, ಐಮಂಗಲ ಹೋಬಳಿ, ಬಸವನಮಾಳಿಗೆ ತಿಮ್ಮಾರೆಡ್ಡಿಯವರು ಕೊಟ್ಟಿರತಕ್ಕ ಅರ್ಜಿಯ ಮೇಲೆ ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಕೊಂಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—3-4 ವರ್ಷಗಳಿಂದಲೂ ಆ ರೀತಿ ಅರ್ಜಿಹಾಕಿಕೊಂಡಿರತಕ್ಕವರು ಇನ್ನೂ ಅನೇಕರಿದ್ದಾರೆ.

ಶ್ರೀ ಜೆ. ಮಹಮದ್ ಇಮಾಂ.—ಯಾವ ಯಾವ ಗ್ರಾಮದವರು?

ಶ್ರೀ ಕಡಿದಾಳ್ ಮಂಜಪ್ಪನವರು.—ಬೇಕಾದಷ್ಟು ಗ್ರಾಮದವರು ಇದ್ದಾರೆ.

ಶ್ರೀ ಜೆ. ಮಹಮದ್ ಇಮಾಂ.—ಈ 12 ಯಂತ್ರಗಳೂ ಕೆಲಸಮಾಡುವುದಕ್ಕೆ ಬಾರದೆ ಹಾಗೆಯೇ ಬಿದ್ದಿರುವುದೇ ಇದಕ್ಕೆಲ್ಲಾ ಕಾರಣವಲ್ಲವೇ?

Sri KADIDAL MANJAPPA.—Most of them are in working order.

ಶ್ರೀ ಆಂಜನೇಯರೆಡ್ಡಿ.—ಈ ಬೋರಿಂಗ್ ಮಿಷನಿನಲ್ಲಿ ಆಯಿಲ್ ಸರಿಯಾಗಿ ಏರುತ್ತಿಲ್ಲ, ಕೆಲಸ ನಿಂತುಹೋಗಿದೆ, ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಶೇವಣ್ಣಾತಿ ಪೊಬಲಗನ್ನು ತೆಗೆದುಕೊಂಡು, ಕೆಲಸ ಪೂರೈಸದಿರುವ ನಿದರ್ಶನಗಳು ಎಷ್ಟಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Accommodation for Harijan Officers and officials in Taluk Headquarters.

Q.—492. Sri SIDDIAH *alias* KUNNIAH (Gundlupet-Heggaddevankote—Scheduled Castes).—

Will the Government be pleased to state:—

(*a*) whether it has come to their notice that Harijan officials and officers are experiencing difficulty in securing dwelling houses in taluk headquarters;

(*b*) if so, the steps the Government have taken to obviate this difficulty?

A.—Sri KADIDAL MANJAPPA (Minister for Revenue and Public Works).—

(*a*) No.

(*b*) Will not arise in view of reply to (*a*) above.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಈ ನೌಕರರುಗಳಿಗೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕ್ವಾರ್ಟರ್ಸುಗಳಿವೆಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಕ್ವಾರ್ಟರ್ಸುಗಳಿದ್ದು ಅರ್ಜಿಹಾಕಿಕೊಂಡಿದ್ದರೂ, ಅಂಥವರಿಗೆ ಆ ಕ್ವಾರ್ಟರ್ಸುಗಳನ್ನು ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ನಿದರ್ಶನಗಳೆಲ್ಲಾದರೂ ಇದ್ದರೆ, ಅವುಗಳನ್ನು ತಾವು ನನ್ನ ಗಮನಕ್ಕೆ ತಂದರೆ ನಾನು ಆ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳುತ್ತೇನೆ.

Mr. SPEAKER.—Questions in the list are over. There is a short notice question by Sri V. R. Naidu and Sri M. Palaniyappan.

SHORT NOTICE QUESTION AND ANSWER.

Strike by the students of the Government Engineering School, Bangalore and its aftermath.

Q.—2. Sri V. R. NAIDU (Malleswaram) and Sri M. PALANIYAPPAN (Ulsoor).—

Will the Government be pleased to state:—

(*a*) whether any strike was held recently in the Government Engineering School, Bangalore;

(*b*) the reason for the strike;

(*c*) whether the Minister has given any assurance to the 'Elders Committee' that approached him for some amicable settlement;

(*d*) whether they have ordered that the fees should be received by the Technical Board and not by the old method?

A.—SRI H. SIDDAVEERAPPA (Minister for Home and Industries) [On behalf of Sri A. G. RAMACHANDRA RAO (Minister for Law and Education)].—

(*a*) and (*b*) It came to the notice of the Government that some students of the Engineering School absented themselves from the class urging that the Examination of the School may be conducted by the Engineering School Council and not by the Central Board of Technical Examinations.

(*c*) Immediately after discussion with the Elders representing the Engineering School students, orders were passed by the Government in their presence.

(*d*) A copy of the order is printed below.

Copy of Order No. E. 15417, *dated 26th February* 1953, *from the Secretary to Government, Education Department, Bangalore, addressed to the Director of Public Instruction in Mysore and Special Officer for Occupational Institutes in Mysore, Bangalore.*

I am directed to state that Sriyuts K. C. Lakshmiah, R. Anantharaman, V. M. Mascarenhas, V. R. Naidu and D. Venkatesh reported on behalf of the students of the School of Engineering, Bangalore, that they were able to convince the students the desirability to call off the strike and proposed that (1) the examinations may